ದಿನಾಂಕ 01-12-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿಗಳ ಪರ ಶ್ರೀ ಎಸ್.ಜಿ.ಬಿ ವಕೀಲರಿಂದ:**

1. ನನಗೆ ಈ ದಾವೆಯ ಬಗ್ಗೆ ಗೊತ್ತಿರುವುದಿಲ್ಲ. ದಾವಾ ಶೆಡ್ಯೂಲ್ ಜಮೀನು ನೆಲ್ಲಿಬೀಡ ಗ್ರಾಮದಲ್ಲಿದೆ. ದಾವಾ ಶೆಡ್ಯೂಲ್ ಆಸ್ತಿಯ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಅದು 2 ಎಕರೆ ಚಿಲ್ಲರೆ ವಿಸ್ತೀರ್ಣ ಇದೆ. ದಾವಾ ಆಸ್ತಿಯ ಪೂ- ರಸ್ತೆ, ಪ- ನಾಗಪ್ಪ ಇವರ ಆಸ್ತಿ, ಉ- ಹುರಕಡ್ಲಿ ಅವರ ಆಸ್ತಿ, ದ-ಗುಂಡೂರು ರವರ ಜಮೀನು ಇವೆ. ದಾವಾ ಆಸ್ತಿಯು ನನಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ದಾವಾ ಆಸ್ತಿಯ ಜಮೀನಿನ ಪಹಣಿ ಪತ್ರಿಕೆಯು ಯಲ್ಲಪ್ಪ, ನನ್ನ ತಮ್ಮ ಕೊಳಕಪ್ಪ ಹಾಗೂ ನನ್ನ ಹೆಸರಿನಲ್ಲಿ ಜಂಟಿಯಾಗಿದೆ. ಸದರಿ ಜಮೀನನ್ನು 3 ಜನರು ಸಾಮೂಹಿಕವಾಗಿ ವಹಿವಾಟು ಮಾಡುತ್ತಿದ್ದೇವೆ. ನನ್ನ ಹಿಸ್ಸೇಯ ಜಮೀನಿನಲ್ಲಿ ಹತ್ತಿ ಫಸಲನ್ನು ಬೆಳೆದಿದ್ದು, ಯಲ್ಲಪ್ಪ ಮತ್ತು ಕೊಳಕಪ್ಪ ರವರು ಗೋವಿನ ಜೋಳದ ಫಸಲನ್ನು ಬೆಳೆದಿರುತ್ತಾರೆ.

2. ಜಮೀನಿಗೆ ಸಂಬಂಧಿಸಿದಂತೆ ಸರಕಾರದಿಂದ ಬರುವ ಬೆಳೆ ವಿಮೆ ಮತ್ತು ಪರಿಹಾರಗಳನ್ನು ನಾನೇ ಅರ್ಜಿ ಸಲ್ಲಿಸಿ ಪಡೆದುಕೊಳ್ಳುತ್ತೇನೆ. ಸದರಿ ಪರಿಹಾರವನ್ನು ನಾನು ಒಬ್ಬನೇ ಉಪಯೋಗಿಸಿಕೊಳ್ಳುತ್ತೇನೆ. ದಾವಾ ಜಮೀನಿನ ಮೇಲೆ ಬ್ಯಾಂಕಿನಲ್ಲಿ ಎಂದಿಗೂ ಸಾಲವನ್ನು ಪಡೆದಿರುವುದಿಲ್ಲ. ದಾವಾ ಶೆಡ್ಯೂಲ್ ಜಮೀನನ್ನು ವಾದಿಯರು ಮತ್ತು ನಾನು ಪ್ರತ್ಯೇಕವಾಗಿ ವಿಭಾಗ ಮಾಡಿಕೊಂಡು ವಹಿವಾಟು ಮಾಡಲು ತೊಂದರೆ ಇಲ್ಲ ಎಂಬ ಸೂಚನೆಗೆ ಸಾಕ್ಷಿಯು ದಾವಾ ಜಮೀನು ನನಗೆ ಮಾತ್ರ ವೈಯಿಕ್ತಿಕ ಹಕ್ಕು ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ನನ್ನ ತಂದೆಯವರ ಆಸ್ತಿ ಆಗಿರುವುದರಿಂದ ಅದರ ಮೇಲೆ ವಾದಿಯರಿಗೂ ಸಮನಾದ ಹಕ್ಕು ಇದೆ ಎಂದರೆ ಸರಿಯಲ್ಲ.

3. ದಾವಾ ಜಮೀನುಗಳಲ್ಲಿ ವಾದಿಯರಿಗೆ ಹಿಸ್ಸೇಯನ್ನು ನೀಡಿದರೆ ಅವರು ಚೆನ್ನಾಗಿ

ಬದುಕಬಹುದು ಎಂದು ಅವರಿಗೆ ಕಾನೂನುಬದ್ದವಾಗಿ ಹಿಸ್ಸೇಯನ್ನು ನಿರಾಕರಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯರು ದಾವಾ ಆಸ್ತಿಯ ಮೇಲೆ ಇದ್ದ ತನ್ನ ಹಕ್ಕನ್ನು ನನ್ನ ತಂದೆಯ ಜೀವಿತಾವಧಿಯಲ್ಲಿಯೇ ಅವರನ್ನು ಮತ್ತು ತಾಯಿಯನ್ನು ನಾನೇ ಜೋಪಾನ ಮಾಡಿದ ಕಾರಣಕ್ಕೆ ಬಿಟ್ಟು ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಹಕ್ಕು ಬಿಟ್ಟಿದ್ದಕ್ಕೆ ಸಂಬಂಧಿಸಿದಂತೆ ವಾದಿಯರು ಯಾವುದೇ ದಾಖಲೆ ಬರೆದುಕೊಟ್ಟಿರುವುದಿಲ್ಲ.

4. ನನ್ನ ತಂದೆ 1987 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆಯು ಮರಣ ಹೊಂದುವ ಪೂರ್ವದಲ್ಲಿಯೇ ಸುಮಾರು ಒಂದು ತಿಂಗಳ ಹಿಂದೆ ನಾನು ಮತ್ತು



ವಾದಿಯರು ಪ್ರತ್ಯೇಕವಾಗಿದ್ದೆವು. ನಮ್ಮ ತಂದೆ ಮರಣ ಹೊಂದಿದ ನಂತರ ನನ್ನ ತಾಯಿಯನ್ನು ನಾನೇ ನೋಡಿಕೊಂಡಿರುತ್ತೇನೆ. ನನ್ನ ತಾಯಿ ಮನೆಯಲ್ಲಿ ಅಡಿಗೆ ಮಾಡುವಾಗ ಸೀರೆಗೆ ಬೆಂಕಿ ಹತ್ತಿಕೊಂಡು ಸುಟ್ಟ ಗಾಯಗಳಿಂದ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ವಾದಿಯರಿಗೂ ಸಹ ಸಮನಾದ ಹಿಸ್ಸೇಯ ಹಕ್ಕು ಇದ್ದರೂ ಸಹ ಅವರಿಗೆ ಸಲ್ಲಬೇಕಾದ ಹಿಸ್ಸೇಯನ್ನು ಅವರಿಗೆ ಪ್ರತ್ಯೇಕವಾಗಿ ನೀಡದೇ ಅವರ ಹೆಸರಿಗೆ ಪ್ರತ್ಯೇಕವಾದ ಪಹಣಿ ಪತ್ರಿಕೆಯನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲಿ ಹಿಸ್ಸೇಯನ್ನು ವಾದಿಯರಿಗೆ ನೀಡದೇ ಇದ್ದರೆ ಅವರು ಬೀದಿಪಾಲು ಆಗುತ್ತಾರೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ